## ಜೆಎಸ್‌ಎಸ್ ಮಹಾವಿದ್ಯಾಪೀಠ
## ಜಗದ್ಗುರು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಮೈಸೂರು

# ಜ್ಞಾನವಾರಿಧಿ–36

### ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮ

**9 ಆಗಸ್ಟ್ 2021 * ಸೋಮವಾರ * ಸಂಜೆ 6.00**

**ದಿವ್ಯ ಸಾನ್ನಿಧ್ಯ**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಸುತ್ತೂರು ಶ್ರೀಕ್ಷೇತ್ರ

**ಉಪನ್ಯಾಸ**



**ಶ್ರೀ ಎಚ್.ಎಲ್. ಸತೀಶ್**
ಶೈಕ್ಷಣಿಕ ಸಮಾಲೋಚಕರು
ಮೈಸೂರು

**ವಿಷಯ: ಸ್ವಜ್ಞಾನವೇ ಶಿಕ್ಷಕರ ಜೀವಾಳ**

(ಉಪನ್ಯಾಸದ ನಂತರ ಆನ್‌ಲೈನ್‌ನಲ್ಲಿ ಬರುವ ಪ್ರಶ್ನೆಗಳಲ್ಲಿ ಆಯ್ದವುಗಳಿಗೆ ಉತ್ತರಿಸಲಾಗುವುದು)
ಶ್ರಾವಣ ಮಾಸದ ಪ್ರತಿ ಸೋಮವಾರವು ಜ್ಞಾನವಾರಿಧಿ ಉಪನ್ಯಾಸ ಜರುಗುತ್ತದೆ

**ಆನ್‌ಲೈನ್ ಮೂಲಕ ನೇರವಾಗಿ ವೀಕ್ಷಿಸಲು ಹಾರ್ದಿಕ ಸ್ವಾಗತ**

LIVE STREAMING

YouTube http://Youtube.com/c/JSSMahavidyapeethaonline

https://www.facebook.com/JSSMVP

**ಜ್ಞಾನವಾರಿಧಿ** ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮವನ್ನು 2020ರ ಡಿಸೆಂಬರ್ ತಿಂಗಳಿನಿಂದ ಪ್ರತಿ ಸೋಮವಾರ ಏರ್ಪಡಿಸಿಕೊಂಡು ಬರಲಾಗುತ್ತಿದೆ. ಧರ್ಮ, ಅಧ್ಯಾತ್ಮ, ಯೋಗ, ಕಲೆ, ಸಾಹಿತ್ಯ, ಸಂಸ್ಕೃತಿ, ಆರೋಗ್ಯ, ಜೀವನಶೈಲಿ, ವಿಜ್ಞಾನ, ತಂತ್ರಜ್ಞಾನ ಮುಂತಾದ ವಿಷಯಗಳು ಮತ್ತು ಪ್ರಚಲಿತ ವಿದ್ಯಮಾನಗಳನ್ನು ಕುರಿತು ದೇಶ ಮತ್ತು ವಿದೇಶದ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಆಯೋಜಿಸಲಾಗುತ್ತಿದೆ.

**ಶ್ರೀ ಎಚ್.ಎಲ್. ಸತೀಶ್‌ರವರು** ನಿವೃತ್ತ ವಿಜ್ಞಾನ ಶಿಕ್ಷಕರು. ಹಿರಿಯ ಶೈಕ್ಷಣಿಕ ಸಮಾಲೋಚಕರು. ಮನೋಶಾಸ್ತ್ರ ಮತ್ತು ಶಿಕ್ಷಣ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಗೈಡೆನ್ಸ್ ಅಂಡ್ ಕೌನ್ಸಲಿಂಗ್ ವಿಷಯದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಪೂರೈಸಿರುವರು.

ಮೈಸೂರಿನ ಸೇಂಟ್ ಆನ್ಸ್ ಬಾಲಿಕಾ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ವೃತ್ತಿ ಪ್ರಾರಂಭಿಸಿದರು. ಅನಂತರ ಡೆಮಾನ್‌ಸ್ಟ್ರೇಶನ್ ಶಾಲೆ ಹಾಗೂ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ವಿಜ್ಞಾನ, ಮೌಲ್ಯಶಿಕ್ಷಣ, ಜೀವನ ಕೌಶಲಗಳ ಕುರಿತು ಅಪಾರ ಜ್ಞಾನವಿದೆ. ನಾಲ್ಕು ದಶಕಗಳ ಕಾಲದ ಬೋಧನಾನುಭವ ಹೊಂದಿದ್ದಾರೆ. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಸದಸ್ಯರು. ಮೈಸೂರು ಘಟಕದ ಸಂಚಾಲಕರಾಗಿ ಕಾರ್ಯನಿರ್ವಹಣೆ ಮಾಡಿದ್ದಾರೆ. ವಿಜ್ಞಾನ ಪಠ್ಯಪುಸ್ತಕ ರಚನಾ ಸಮಿತಿಯ ಸದಸ್ಯರಾಗಿದ್ದರು. ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಶಿಕ್ಷಣಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ರೂಪಿಸಿ ಅವುಗಳ ಅನುಷ್ಠಾನ ಮತ್ತು ಪ್ರಸ್ತುತಿಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. 2000ಕ್ಕೂ ಹೆಚ್ಚು ಶಿಕ್ಷಕ ತರಬೇತಿ ಕಾರ್ಯಾಗಾರಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡಿರುವರು. ಶಿಕ್ಷಕರ ತರಬೇತಿಗಾಗಿ ಕೈಪಿಡಿಗಳು ಮತ್ತು ಪೂರಕ ಸಾಮಗ್ರಿಗಳ ತಯಾರಿಕೆ ಮಾಡಿದ್ದಾರೆ. ನೂರಕ್ಕೂ ಹೆಚ್ಚು ವಿಜ್ಞಾನ ಲೇಖನಗಳು ಪ್ರಕಟವಾಗಿವೆ. ಹಲವಾರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಚಾರಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ.

**ಜ್ಞಾನವಾರಿಧಿ–37 * 16 ಆಗಸ್ಟ್ 2021**

**ಪ್ರೊ. ಜಿ.ಬಿ. ಶಿವರಾಜು**

ಟ್ರಸ್ಟಿಗಳು, ಕಸ್ತೂರಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್
ಇಂದೋರ್, ಅರಸೀಕೆರೆ

ವಿಷಯ: ಗಾಂಧಿ ವಿಚಾರಗಳ ಪ್ರಸ್ತುತತೆ

**ಜ್ಞಾನವಾರಿಧಿ–38 * 23 ಆಗಸ್ಟ್ 2021**

**ಕ್ಯಾಪ್ಟನ್ ಶ್ರೀ ಗಣೇಶ್ ಕಾರ್ಣಿಕ್**

ಮಾಜಿ ವಿಧಾನಪರಿಷತ್ ಸದಸ್ಯರು
ಉಡುಪಿ

ವಿಷಯ: ಭಾರತೀಯ ಸೈನ್ಯ ಹಾಗೂ ದೇಶಭಕ್ತಿ